ಸಿ.ಸಿ. ನಂ– 49/2024

Pw–1

ದಿನಾಂಕಃ 17–10–2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಶ್ರೀ. ಪಿ ಪಿ ಎನ್ ಆರೋಪಿ ಪರ ವಕೀಲರಿಂದ–** ಆರೋಪಿ ತನ್ನ ಪ್ರಾಪಂಚಿಕ ಅಡಚಣೆ ಸಲುವಾಗಿ ನನ್ನ ಬಳಿ ಸಾಲವನ್ನು ಪಡೆದಿರುತ್ತಾರೆ. ನಾನು ನೀಡಿದ ಹಣದಲ್ಲಿ 500 ಮುಖಬೆಲೆಯ ನೋಟಗಳು ಹಾಗೂ 200 ಮುಖಬೆಲೆಯ ನೋಟಗಳು ಇದ್ದವು. ನಾನು ನೀಡಿದ ಹಣವನ್ನು ಕಾಳು ಕಡಿ ಮಾರಾಟ ಮಾಡಿ ಬಂದ ಹಣ ಹಾಗೂ ಕೂಡಿಟ್ಟ ಹಣವನ್ನು ನೀಡಿರುತ್ತೇನೆ. ಹಣವನ್ನು ಮನೆಯಲ್ಲಿಯೆ ಕೂಡಿಟ್ಟ ಹಣವಾಗಿತ್ತು. ಆರೋಪಿಗೆ ನಾನು ಸಾಲವನ್ನು ಡಿಸೆಂಬರ–2022 ರಲ್ಲಿ ನೀಡಿರುತ್ತೇನೆ. ಈ ಮಾತು ಸುಳ್ಳು ಎಂದರೆ ಸರಿಯಲ್ಲ. ಆರೋಪಿ ನನ್ನ ಕಡೆಯಿಂದ ರೂ. 50,000/– ಹಣವನ್ನು ಮಾತ್ರ ಪಡೆದುಕೊಂಡಿದ್ದ ಎಂದರೆ ಸರಿಯಲ್ಲ. ಆರೋಪಿ ಸಹಿ ಮಾಡಿದ ಖಾಲಿ ಚೆಕ್ಕನ್ನು ನೀಡಿದ್ದು ಅದರಲ್ಲಿ ನಾನೇ ರೂ.6,50,000/– ಎಂದು ನಮೂದಿಸಿ ದುರುಪಯೋಗ ಪಡಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಚೆಕ್ಕ ಮೇಲಿರುವ ಸಹಿಯನ್ನು ಹೊರತು ಪಡಿಸಿ ಅದರಲ್ಲಿರುವ ಬೇರೆ ಅಕ್ಷರ ಆರೋಪಿಯದು ಅಲ್ಲ ಎಂದರೆ ಸರಿಯಲ್ಲ. ಆರೋಪಿ ನನಗೆ ಚೆಕ್ಕ ನೀಡಿ ತನ್ನ ಖಾತೆಯಲ್ಲಿ ಹಣ ಇದೆ ತೆಗೆದುಕೊಳ್ಳಿ ಎಂದು ಹೇಳಿದ್ದಾನೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ರೂ. 50,000/– ಜೊತೆಗೆ ಬಡ್ಡಿಯನ್ನು ಸೇರಿಸಿ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಆದ್ದರಿಂದ ಹಣದ ವ್ಯವಹಾರ ಮುಕ್ತಾಯವಾಗಿದೆ ನನಗೂ ಹಾಗೂ ಆರೋಪಿಗೆ ಯಾವುದೇ ವ್ಯವಹಾರ ಇಲ್ಲ ಎಂದರೆ ಸರಿಯಲ್ಲ. ಆರೋಪಿ ತನ್ನ ಕಬ್ಬಿನ ಬಿಲ್ ಬಂದಿದ್ದು ಅದರಿಂದ ರೂ.50,000/– ಹಣವನ್ನು ನೀಡಿದ್ದಾರೆ ಎಂದರೆ ಸರಿಯಲ್ಲ. ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ**

ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೆ.ಸರಿ ಇದೆ

ಸಹಿ/–

ಹೆಚುವರಿ ದಿವಾಣಿ ಮತ್ತು ಜೆ.ಎಂ.ಎಫ್.ಸಿ.

ನ್ಯಾಯಾಧೀಶರು ಜಮಖಂಡಿ.